# ಕ್ಷುರಸ್ಯಧಾರಾ

❑ ಸ್ವಾಮಿ ತ್ಯಾಗಾನಂದ

(ಹಿಂದಿನ ಸಂಚಿಕೆಯಿಂದ ಮುಂದುವರೆದುದು)

**ಕೈ**ಲಾಸ ಮತ್ತು ವೈಕುಂಠದಲ್ಲಿ ತಮ್ಮ ಕಹಳೆಯನ್ನು ಊದಿದ ನಂತರ, ವಿಶ್ವಪರ್ಯಟನೆ ಮಾಡಲು ಇದೀಗ ಸರಿಯಾದ ಸಮಯ ಎಂದು ನಾರದರು ಯೋಚಿಸಿದರು. ತಮ್ಮ ಪ್ರಯಾಣವನ್ನು ಮುಂದುವರಿಸಿದರು.

ನಾರದರು ಹೋಗುತ್ತಿದ್ದ ಮಾರ್ಗದಲ್ಲಿ ಮರುಳು ಗೊಳಿಸುವಂತಹ ಬಂಗಾರದ ರಾಜ್ಯವೊಂದು ಎಲ್ಲಿಂದಲೋ ಥಟ್ಟನೆ ಮೇಲೆದ್ದಿತು. ಈ ಹೊಸ ಜಾಗವನ್ನು ನೋಡಿ ನಾರದರಿಗೆ ಆಶ್ಚರ್ಯವಾಯಿತು. ಅವರು ಹಿಂದೆ ಅನೇಕ ಬಾರಿ ವಿಶ್ವ ಪರ್ಯಟನೆ ಮಾಡಿದ್ದರು ಮತ್ತು ತಾವು ಭೇಟಿಕೊಡದ ಜಾಗವೇ ಇಲ್ಲವೆಂದೂ ಅವರಿಗೆ ನಿಸ್ಸಂದೇಹವಾಗಿ ಗೊತ್ತಿತ್ತು. ಆದರೆ ಅವರಿಗೆ ಈ ಒಂದು ಜಾಗವನ್ನು ಹಿಂದೆ ನೋಡಿದ ನೆನಪಿಲ್ಲ. ನಿಜಕ್ಕೂ ಆ ಜಾಗ ಒಂದು ಸ್ವರ್ಗ ಸಮಾನವಾಗಿತ್ತು. ಅಲ್ಲಿನ ಪ್ರತಿಯೊಂದೂ ಮನೋಹರವಾಗಿಯೂ ಮತ್ತು ಮೋಹಗೊಳಿಸುವಂತೆಯೂ ಇತ್ತು. ಇಡೀ ಪಟ್ಟಣದಲ್ಲಿ ಹಬ್ಬದ ವಾತಾವರಣವಿತ್ತು. ಆ ರಾಜ್ಯದ ರಾಜಕುಮಾರಿಯ ವಿವಾಹ ನಡೆಯಲಿದೆ ಮತ್ತು ಆ ಸ್ವಯಂವರ ಸಮಾರಂಭಕ್ಕಾಗಿ ಜನರು ಸಿದ್ಧವಾಗುತ್ತಿರುವರು ಎಂದು ಕೆಲವರು ದಾರಿಹೋಕರಿಂದ ನಾರದರು ತಿಳಿದುಕೊಂಡರು.

ಅಲ್ಲಿಯ ರಾಜನ ಕುಟುಂಬವನ್ನು ಭೇಟಿಮಾಡಲು ನಾರದರು ನಿರ್ಧರಿಸಿದರು. ದೇವರ್ಷಿಯ ಆಗಮನದ ವಾರ್ತೆ ರಾಜನಿಗೆ ತಿಳಿಯುತ್ತಿದ್ದಂತೆಯೇ ಅವನು ಮಹಾರಾಣಿಯೊಡನೆ ಘನತೆವೆತ್ತ ಅತಿಥಿಯನ್ನು ಸ್ವಾಗತಿಸಲು ಅರಮನೆಯ ಮುಖ್ಯದ್ವಾರಕ್ಕೆ ಬಂದನು. ಸ್ವತಃ ರಾಜನೇ ಮುನಿವರ್ಯನ ಪಾದಗಳನ್ನು ತೊಳೆದು, ಪೂಜಿಸಿ ಅವರ ಆಶೀರ್ವಾದವನ್ನು ಬೇಡಿದನು. ಅವನ ಭಕ್ತಿಯಿಂದ ನಾರದರ ಮನಸ್ಸು ತುಂಬಿಹೋಯಿತು. ನಂತರ ರಾಜನು ರಾಜಕುಮಾರಿಯನ್ನು ಕರೆಕಳುಹಿಸಿದ. ತಾರುಣ್ಯದಿಂದ ಕೂಡಿದ, ಮನೋಹರವಾದ ಕನ್ಯೆಯ ಪ್ರವೇಶವಾಗುತ್ತಿದ್ದಂತೆ, "ಇವಳು ನನ್ನ ಮಗಳು, ವಿಶ್ವಮೋಹಿನಿ," ಎಂದು ನಾರದರಿಗೆ ಪರಿಚಯಿಸಿ, "ಪೂಜ್ಯರೇ, ದಯವಿಟ್ಟು ಅವಳನ್ನು ಆಶೀರ್ವದಿಸಿ. ಅವಳು ಸದ್ಯದಲ್ಲೇ ವಿವಾಹವಾಗಲಿದ್ದಾಳೆ. ದಯವಿಟ್ಟು ಅವಳ ಮುಂದಿನ ಭವಿಷ್ಯವನ್ನು ತಿಳಿಸಿ," ಎಂದು ರಾಜನು ಕೇಳಿಕೊಂಡನು.

ನಾರದರು ತಲೆ ಎತ್ತಿ ನೋಡಿದರು, ಕೆಲವು ಕ್ಷಣ ಅವರ ಉಸಿರಾಟವೇ ಸ್ಥಗಿತಗೊಂಡಿತು. ತಮ್ಮ ಜೀವಮಾನದಲ್ಲೇ ಯಾರಲ್ಲೂ ಅಂತಹ ಅದ್ವಿತೀಯ ಸೌಂದರ್ಯವನ್ನು ಅವರು ನೋಡಿರಲಿಲ್ಲ. ಅವಳ ಹೆಸರಿಗೆ ತಕ್ಕಂತೆ, ಆ ಹುಡುಗಿ ನಿಜಕ್ಕೂ ವಿಶ್ವಮೋಹಿನಿಯೇ, ತನ್ನ ಸೌಂದರ್ಯದಿಂದ ವಿಶ್ವವನ್ನೇ ಬಂಧಿಸುವ ಶಕ್ತಿ ಇರುವವಳು.

> ▪ ಸೂಕ್ಷ್ಮ ಮತ್ತು ಜಾಗೃತ ಮನಸ್ಸು ಇಲ್ಲದಿದ್ದರೆ ಆಧ್ಯಾತ್ಮಿಕ ಜೀವನ ಸಂಪೂರ್ಣ ನಿಷ್ಫಲವಾಗುವುದು. —ಸ್ವಾಮಿ ಯತೀಶ್ವರಾನಂದ ▪

ತಮಗರಿವಿಲ್ಲದೆಯೇ ನಾರದರು ಪ್ರೇಮಪಾಶದಲ್ಲಿ ಸಿಲುಕಿಬಿಟ್ಟಿದ್ದರು. ಅವರಿಗೆ ಪ್ರಣಾಮಮಾಡಿದ ಆ ಹುಡುಗಿ. ತನ್ನ ಕೈಯನ್ನು ಮುಂದೆ ಚಾಚಿದಳು. ಆಕೆಯ ಅಂಗೈಮೇಲಿನ ರೇಖೆಗಳನ್ನು ನೋಡಿ ನಾರದರು ಮತ್ತೂ ಉತ್ತೇಜಿತರಾದರು. ಆ ಹುಡುಗಿಯ ಪತಿಯಾಗಲಿರುವವನು ಚಿರಂಜೀವಿಯೂ ಸೋಲಿಲ್ಲದವನೂ ವಿಶ್ವದ ಪ್ರತಿಯೊಂದು ಜೀವಿಯಿಂದಲೂ ಪ್ರೀತಿ, ಮನ್ನಣೆ, ಸೇವೆಯನ್ನು ಪಡೆಯುವ ಅಧಿಕಾರವುಳ್ಳವನೂ ಆಗಿರುತ್ತಾನೆಂಬುದನ್ನು ಅವರು ಮನಗಂಡರು. ಕೇವಲ ಭಗವಂತನೊಬ್ಬನೇ ಅದಕ್ಕೆ ಅರ್ಹ ಅಭ್ಯರ್ಥಿ. ಭಗವಂತನ ಶಕ್ತಿಯಿಂದ ಉದ್ಭವವಾಗಿರುವ ಈ ರಾಜ್ಯದಲ್ಲಿರುವ ಈ ವಿಶ್ವಮೋಹಿನಿ ಬೇರಾರೂ ಅಲ್ಲ ಸ್ವತಃ ಲಕ್ಷ್ಮಿಯ ಮತ್ತೊಂದು ರೂಪ.

ನಾರದರು ಕುತಂತ್ರದ ಮಾರ್ಗವನ್ನು ಹಿಡಿದರು. ರಾಜಕುಮಾರಿಯ ಭವಿಷ್ಯದ ಬಗ್ಗೆ ಸತ್ಯವನ್ನು ಹೇಳದಿರುವುದೇ ವಿವೇಕವಾದದ್ದು ಎಂದು ಅವರು ಆಲೋಚಿಸಿದರು. ಅವಳ ತಂದೆ ಅವಳನ್ನು ಬೇರೆ ಯಾರಿಗಾದರೂ ವಿವಾಹ ಮಾಡಿಕೊಟ್ಟರೆ ಎಂದು ಅವರಿಗೆ ಭಯವಾಯಿತು. ಹಾಗಾಗಿ ನಾರದರು ಅವಳ ಭವಿಷ್ಯದ ಬಗ್ಗೆ ತಾವೇ ಕಥೆಯನ್ನು ಹುಟ್ಟಿಸಿಕೊಂಡು ಹೇಳಿ, ಅವಳನ್ನು ಆಶೀರ್ವದಿಸಿ, ಆದಷ್ಟು ಬೇಗ ಅವರಿಂದ ಬೀಳ್ಕೊಂಡರು. ಸ್ವಯಂವರದಲ್ಲಿ ರಾಜಕುಮಾರಿ ಬೇರೆ ಯಾರನ್ನೂ ಆರಿಸದೆ ತನ್ನನ್ನೇ ಪತಿಯನ್ನಾಗಿ ಆರಿಸುವಂತೆ ಮಾಡುವುದೇ ಈಗ ಅವರ ಸದ್ಯದ ಗುರಿಯಾಯಿತು. ತನಗೆ ಅತ್ಯಾವಶ್ಯಕವಾಗಿ ಬೇಕಾಗಿರುವುದು ಭಗವಂತನ ಸೌಂದರ್ಯ ಎಂದು ನಾರದರಿಗೆ ತೋರಿತು. ಅದೊಂದು ದೊರೆತುಬಿಟ್ಟರೆ ಗುರಿ ಸುಲಭವಾಗಿ ನೆರವೇರುತ್ತದೆ. ನಾರದರ ಈ ರೀತಿಯ ಭಾವನೆಯಲ್ಲಿ ಒಂದು ಸೂಕ್ಷ್ಮವಾದ ಮನೋವೈಜ್ಞಾನಿಕ ಸತ್ಯ ಅಡಕವಾಗಿದೆ. ಸ್ವತಃ ಅವರೇ ತಮ್ಮ ಸಾಧನೆ ಮತ್ತು ಔದಾರ್ಯಗಳಿಂದ ಅಂದವಾದ ವ್ಯಕ್ತಿತ್ವವುಳ್ಳವರಾಗಿದ್ದರು. ಆದರೆ ಆಸೆಗಳು ಅವರ ಮನಸ್ಸನ್ನು ಕತ್ತಲು ಮಾಡಿದ್ದವು. ಅದರಲ್ಲೂ

ವಿಶೇಷವಾಗಿ ಕಾಮಕ್ಕೆ ಸಂಬಂಧಪಟ್ಟಂತಹ ಆಸೆಗಳು, ಭಯಂಕರವಾದ ಆಂತರಿಕ ದುರ್ಬಲತೆ, ಅಪೂರ್ಣತೆ, ನ್ಯೂನತೆಯ ಭಾವವನ್ನು ಉಂಟುಮಾಡುತ್ತವೆ. ನಾರದರು ಈಗ ಅದನ್ನೇ ಅನುಭವಿಸುತ್ತಿರುವುದು.

ದೈಹಿಕ ಸೌಂದರ್ಯ ಒಂದು ರೀತಿಯಾದರೆ, ನೈತಿಕ ಸೌಂದರ್ಯವೇ ಬೇರೆ ರೀತಿಯದು. ಮೊದಲನೆಯದು ತಾತ್ಕಾಲಿಕವಾದದ್ದು, ಕೇವಲ ಬಾಹ್ಯರೂಪಕ್ಕೆ ಸಂಬಂಧಪಟ್ಟದ್ದು, "ಕೇವಲ ಸಣ್ಣ ಅನಾರೋಗ್ಯದಿಂದ ಅದು ವಿರೂಪಗೊಳ್ಳಬಹುದು ಮತ್ತು ನಾಶವಾಗಬಹುದು." (ಥಾಮಸ್ ಎ. ಕೆಂಪಿಸ್‌ರವರ *The Imitation of Christ*, 1.7.2). ಅದಕ್ಕೆ ಬದಲಾಗಿ ನೈತಿಕ ಸೌಂದರ್ಯವೇ ಒಬ್ಬ ವ್ಯಕ್ತಿಯ ನಿಜವಾದ ಸೌಂದರ್ಯ. ೧೯೧೨ರಲ್ಲಿ ವೈದ್ಯಕೀಯದಲ್ಲಿ ನೊಬೆಲ್ ಪ್ರಶಸ್ತಿ ಪಡೆದ ಡಾ. ಅಲೆಕ್ಸಿಸ್ ಕಾರೆಲ್, ಪೂರ್ಣವಾಗಿ ಪರಿಶುದ್ಧ ಮತ್ತು ಪವಿತ್ರ ಜೀವನವನ್ನು ನಡೆಸುತ್ತಿರುವ ವ್ಯಕ್ತಿಯಿಂದ ಹೊರಹೊಮ್ಮುವ ಸೌಂದರ್ಯದ ಬಗ್ಗೆ ಹೀಗೆ ಹೇಳುತ್ತಾರೆ: "ಯಾವ ವ್ಯಕ್ತಿಯ ವರ್ತನೆ ಒಂದು ನೈತಿಕ ಗುರಿಯಿಂದ ಪ್ರೇರೇಪಿಸಲ್ಪಟ್ಟಿದೆಯೋ, ಅಂತಹ ವ್ಯಕ್ತಿಯನ್ನು ಸಂಧಿಸಿದಾಗ, ಮೇಲಿನ ಅಂಶವನ್ನು ಗಮನಿಸದೆ ಇರಲು ಸಾಧ್ಯವಿಲ್ಲ—ಅದನ್ನು ಯಾರೂ ಮರೆಯಲು ಸಾಧ್ಯವಿಲ್ಲ. ಪ್ರಕೃತಿಯ ಸೌಂದರ್ಯಕ್ಕಿಂತ, ಈ ರೀತಿಯ ಸೌಂದರ್ಯ ಹೆಚ್ಚಿನ ಪ್ರಭಾವವನ್ನುಂಟುಮಾಡಬಲ್ಲದು. ಯಾರು ಇದನ್ನು ಹೊಂದಿರುತ್ತಾರೋ ಅವರಿಗೆ ಅದು ವಿವರಿಸಲಾಗದ ಒಂದು ಅಪೂರ್ವ ಶಕ್ತಿಯನ್ನು ಕೊಡುತ್ತದೆ. ಬುದ್ಧಿಶಕ್ತಿಯನ್ನು ಹೆಚ್ಚುಮಾಡುತ್ತದೆ, ಮನಸ್ಸಿಗೆ ಶಾಂತಿಯನ್ನು ನೀಡುತ್ತದೆ. ಯಾವುದೇ ವಿಜ್ಞಾನ, ಕಲೆ, ಧಾರ್ಮಿಕ ಆಚರಣೆಗಳು ಎಲ್ಲದಕ್ಕಿಂತ ನೈತಿಕ ಸೌಂದರ್ಯವೇ ನಾಗರಿಕತೆಯ ತಳಹದಿ."

> **ಮನಸ್ಸು ಹೃದಯಗಳ ಪವಿತ್ರತೆ ದೇಹದ ಮೂಲಕ ಬೆಳಗುತ್ತದೆ. ಅತ್ಯಂತ ಸುಂದರ ವ್ಯಕ್ತಿಗಳಲ್ಲಿ ಕಾಣದ ಶೋಭೆಯನ್ನು ಇನ್ನಿತರನೇಕರಲ್ಲಿ ಕಾಣಬಹುದು.**
>
> — *ಸ್ವಾಮಿ ಯತೀಶ್ವರಾನಂದ*

ಶ್ರೀಹರಿಯೇ ತನ್ನ ಆಶ್ರಯದಾತ ಮತ್ತು ತನ್ನ ಬಗ್ಗೆ ಆತನಿಗೆ ಅತ್ಯಂತ ಪ್ರೀತಿಯಿದೆ ಎಂದು ನಾರದರ ಮನಸ್ಸಿಗೆ ಹೊಳೆಯಿತು. ತಾನೇ ಹೋಗಿ ಭಗವಂತನನ್ನು ಅವನ ಸೌಂದರ್ಯವನ್ನು ತನಗೆ ಕೊಡುವಂತೆ ಬೇಡುತ್ತೇನೆ ಎಂದು ನಾರದರು ನಿರ್ಧಾರ ಮಾಡಿದರು. ಇಲ್ಲಿ ನಾವು ಮನುಷ್ಯರ ಜೀವನದಲ್ಲಿ ಸಾಧಾರಣವಾಗಿ ಕಾಣುವ ಮತ್ತೊಂದು ಮುಖವನ್ನು ನೋಡುತ್ತಿದ್ದೇವೆ. ಕೆಲವೇ ಸಮಯದ ಹಿಂದೆ ನಾರದರು ಶ್ರೀಹರಿಯನ್ನು ಕೀಳಾಗಿ ಕಂಡಿದ್ದರು ಮತ್ತು ತಾನೇ ಭಗವಂತನಿಗಿಂತ ಮೇಲು ಎಂದು ಭಾವಿಸಿದ್ದರು. ಈಗ ಅದೇ ನಾರದರು, ಭಗವಂತ ಯಾವಾಗಲೂ ತನಗೆ ಎಷ್ಟೊಂದು ಉಪಕಾರಿಯಾಗಿದ್ದಾನೆಂದು ತಮಗೆ ತಾವೇ ಹೇಳಿಕೊಳ್ಳುತ್ತಾ, ಭಗವಂತನನ್ನು ಬೇಡಲು ವೈಕುಂಠದ ಕಡೆಗೆ ಹೊರಡುತ್ತಿದ್ದಾರೆ. ಹೆಚ್ಚಿನ ಜನ ಮಾಡುವುದೇ ಹೀಗಲ್ಲವೇ? ಯಶಸ್ಸು ಮತ್ತು ಕೀರ್ತಿಯ ಕ್ಷಣಗಳಲ್ಲಿ ಜನ ಅದು ತಮ್ಮ ಸ್ವಂತ ಪರಿಶ್ರಮ ಎಂದು ಪ್ರಮಾಣೀಕರಿಸುತ್ತಾರೆ. ಆಪತ್ಕಾಲ ಮತ್ತು ನಿರಾಶೆಯ ಕ್ಷಣಗಳಲ್ಲಿ ಅದೇ ಜನ ಆಶ್ಚರ್ಯಕರ ರೀತಿಯಲ್ಲಿ ದೈವಿಕತೆಯಲ್ಲಿ ಶರಣಾಗತಿಯ ಭಾವನೆಯನ್ನು ಹೊಂದಿ, ಭಗವಂತನ ಕೃಪೆಯಿಲ್ಲದೆ ಯಾವುದನ್ನೂ ಸಾಧಿಸಲು ಸಾಧ್ಯವಿಲ್ಲವೆಂದು ಘೋಷಿಸುತ್ತಾರೆ. ಜೀವನದ ಇಂತಹ ಅಸಂಬದ್ಧತೆ ನಮಗೆಲ್ಲ ಪರಿಚಿತವಾದುದೇ ಆಗಿದೆ. ನಾರದರ ಜೀವನದಲ್ಲಿ ಸಹ ಇದೇ ಅಸಂಬದ್ಧತೆಯನ್ನು ನೋಡುತ್ತೇವೆ.

ವೈಕುಂಠದ ಕಡೆಗೆ ಭ್ರಾಂತರಾಗಿ ಧಾವಿಸುತ್ತಿದ್ದ ನಾರದರ ಎದುರಿಗೆ ಆ ಭಗವಂತ ಪ್ರತ್ಯಕ್ಷನಾದ. ಭಗವಂತ ಕೇಳಿದ, "ಎಲ್ಲಿಗೆ ಹೋಗುತ್ತಿರುವೆ ಮಗು? ಬಹಳ ವ್ಯಸ್ತನಾದಂತೆ ಕಾಣುತ್ತಿರುವೆಯಲ್ಲ." "ಓ ಭಗವಂತ! ದಯವಿಟ್ಟು ನಿನ್ನ ಸೌಂದರ್ಯವನ್ನು ನನಗೆ ಕೊಡು. ತಕ್ಷಣವೇ ನನಗೆ ಅದರ ಆವಶ್ಯಕತೆ ಇದೆ. ನಾನು ನಿನ್ನಲ್ಲಿ ದೃಢನಿಷ್ಠೆಯುಳ್ಳ ಸೇವಕ. ನೀನು ನನ್ನ ಒಳಿತನ್ನೇ ಸದಾ ಬಯಸುವವನು. ಯಾವುದು ನನಗೆ ಒಳ್ಳೆಯದೋ ಅದನ್ನೇ ನೀನು ಮಾಡುತ್ತೀಯೆ ಎಂದು ನನಗೆ ಗೊತ್ತು" ಎಂದು ನಾರದರು ಭಗವಂತನ ಪಾದಗಳಿಗೆರಗಿ ದೀನರಾಗಿ ಕೇಳಿಕೊಂಡರು.

ಭಗವಂತ ನಸುನಕ್ಕ. ಹೌದು, ಅವನು ಖಂಡಿತವಾಗಿ ನಾರದರಿಗೆ ಯಾವುದು ಒಳ್ಳೆಯದೋ ಅದನ್ನೇ ಮಾಡುವುದು. ಭಗವಂತ "ತಥಾಸ್ತು!" ಎಂದೊಡನೆ ನಾರದರು ಮತ್ತೊಮ್ಮೆ ಅವನ ಪಾದಗಳಿಗೆರಗಿದರು. "ರೋಗಿ ತಪ್ಪು ಔಷಧಿಯನ್ನು ಕೇಳಿದರೆ, ವೈದ್ಯ ಕೊಡುವನೇನು? ರೋಗಿ ಚೇತರಿಸಿಕೊಳ್ಳಲು ಬೇಕಾದ ಸರಿಯಾದ ಔಷಧವನ್ನು ಮಾತ್ರ ವೈದ್ಯ ಕೊಡುತ್ತಾನೆ" ಎಂದು ಮೆಲುದನಿಯಲ್ಲಿ ವಿಷ್ಣು ಹೇಳಿದನು. ನಾರದರಿಗೇನಾದರೂ ಇದು ಕೇಳಿಸಿದ್ದಿದ್ದರೆ, ಬಹುಶಃ ಅವರು ಸ್ವಲ್ಪ ಎಚ್ಚರಿಕೆಯಿಂದಿರುತ್ತಿದ್ದರೇನೋ. ಆದರೆ "ತಥಾಸ್ತು" ಎಂದು ಭಗವಂತ ಹೇಳಿದ್ದನ್ನು ಕೇಳಿದಕೂಡಲೇ, ಅವರ ಮನಸ್ಸು ಹಿಂದಕ್ಕೆ ಸಂಚರಿಸಿತು. ವಿಶ್ವಮೋಹಿನಿ, ಸ್ವಯಂವರ ಸಮಾರಂಭ ಮತ್ತು ರಾಜಕುಮಾರಿ ತನ್ನನ್ನು ಪತಿಯನ್ನಾಗಿ ಆರಿಸುವುದನ್ನು ಆಲೋಚಿಸುತ್ತಿದ್ದುದರಿಂದ ಭಗವಂತನ ಸ್ಪಷ್ಟವಾದ ಎಚ್ಚರಿಕೆಯ ಸ್ವರ ನಾರದರ ಕಿವಿಗೆ ಬೀಳಲಿಲ್ಲ.

ಭಗವಂತ ಅವರಿಗೆ ಕೊಟ್ಟಿದ್ದೇನು? ಭಗವಂತನ ಸೌಂದರ್ಯವನ್ನು ನಾರದರು ಬಯಸಿದ್ದರು. ಭಗವಂತ ಕೊಟ್ಟದ್ದು ಕಪಿಯ ಮುಖ. ನಿಷ್ಕರುಣೆ ಎನಿಸುವುದೆ? ನಿಜವಾಗಿ ಹಾಗೆನ್ನಿಸಬಾರದು. ನಾವು ಸದ್ಯದಲ್ಲೇ ನೋಡುವಂತೆ, ಶ್ರೀಹರಿ ಏನನ್ನು ಅವರಿಗೆ ಕೊಟ್ಟಿದ್ದಾನೋ ಅದು ಅವರ ಒಳ್ಳೆಯದಕ್ಕೆ. ಅದೆಲ್ಲಕ್ಕಿಂತ, ಭಗವಂತ ವೈಕುಂಠದಲ್ಲಿದ್ದಾಗ ಇರುವ ಅವನ ಮನೋಹರವಾದ ರೂಪದಲ್ಲಿ ಮಾತ್ರ ಭಗವಂತನ ಸೌಂದರ್ಯ ವ್ಯಕ್ತವಾಗಿಲ್ಲ. ವಿಶ್ವವನ್ನು ಸೃಷ್ಟಿಸಿದ ನಂತರ ಸ್ವತಃ ಭಗವಂತನೇ ಅದರ ಕಣ

ಕಣಗಳನ್ನೂ ಪ್ರವೇಶಿಸಿರುವುದರಿಂದ ಈ ವಿಶ್ವದ ಎಲ್ಲ ರೂಪಗಳಲ್ಲೂ ಅವನ ಸೌಂದರ್ಯ ಸಮಾನವಾಗಿ ವ್ಯಕ್ತವಾಗಿದೆ. ಪ್ರತಿಯೊಂದು ರೂಪದಿಂದಲೂ ಭಗವಂತನೇ ಗೋಚರವಾಗುತ್ತಿರುವುದು —ಅವನನ್ನು ನೋಡುವ ದೃಷ್ಟಿ ನಮಗಿರಬೇಕು ಅಷ್ಟೇ. ಪ್ರತಿಯೊಂದರಲ್ಲೂ ಭಗವಂತನ ರೂಪವನ್ನೇ ಕಾಣುವುದು ಆಧ್ಯಾತ್ಮಿಕ ಸಾಕ್ಷಾತ್ಕಾರದ ಅತ್ಯುನ್ನತ ಸ್ಥಿತಿ ಎನ್ನುವುದೂ ಅಷ್ಟೇ ಸತ್ಯ. ಅದು ಕೆಲವೇ ಅಸಾಧಾರಣ ವ್ಯಕ್ತಿಗಳಲ್ಲಿ ಕಂಡುಬರುತ್ತದೆ. ಖಂಡಿತವಾಗಿ, ಈಗಿನ ಸ್ಥಿತಿಯಲ್ಲಿ ನಾರದರು ಆ ಅನುಭವದಿಂದ ಬಹಳ ದೂರದಲ್ಲಿದ್ದಾರೆ. ಭಗವಂತನ ರೂಪಕ್ಕಾಗಿ ಪ್ರಾರ್ಥಿಸಿದಾಗ ಅವರು ಮನಸ್ಸಿನಲ್ಲಿ ಕಲ್ಪಿಸಿಕೊಂಡದ್ದು ಭಗವಂತನ "ವೈಕುಂಠದ-ರೂಪ."

ಶ್ರೀಹರಿ ಏತಕ್ಕಾಗಿ ಅವರಿಗೆ 'ಮಂಗನ ರೂಪ'ವನ್ನು ಕೊಡಲು ನಿರ್ಧರಿಸಿದ? ಯಾವುದು ಒಳಗಡೆ ಅಡಗಿಕೊಂಡಿತ್ತೋ ಅದನ್ನು ಹೊರಗಡೆ ತರುವುದೇ ಪ್ರಾಯಶಃ ಭಗವಂತನ ಇಚ್ಛೆಯಿದ್ದಿರಬಹುದೆಂದು ತೋರುತ್ತದೆ. ಪ್ರಾಣಿಗಳಲ್ಲಿ ಅತ್ಯಂತ ಕಾಮ ಪ್ರವೃತ್ತಿ ಹೊಂದಿರುವುದು ಕಪಿ ಎಂದು ತಿಳಿದುಬಂದಿದೆ. ನಾರದರ ಅಪ್ರಜ್ಞಾ ಮನಸ್ಸಿನಲ್ಲಿ ಹುದುಗಿರುವ ಇಂತಹ ಪ್ರವೃತ್ತಿಗಳನ್ನು ಹೊರತೆಗೆದು ಅದು ಅವರ ಪ್ರಜ್ಞೆಗೆ ನಿಲುಕುವಂತೆ ಮಾಡುವ ಆವಶ್ಯಕತೆ ಇತ್ತು. ಅಂತರ್ಯದಲ್ಲಿ ನಾರದರು ಈಗಾಗಲೇ 'ಕಪಿ' ಯಾಗಿದ್ದಾರೆ, ಆ 'ಕಪಿ'ಯನ್ನು ಹೊರಗೆ ತಂದಿದ್ದಷ್ಟೇ ಭಗವಂತ ಮಾಡಿದ್ದು. ನಿಮ್ಮ ಪಾಳೆಯದಲ್ಲೇ ಒಬ್ಬ ಶತ್ರು ಇರುವುದೇ ಕೆಟ್ಟದ್ದು, ಆದರೆ ಆ ಶತ್ರು ಇರುವುದೇ ತಿಳಿಯದಿರುವುದು ಇನ್ನೂ ಕೆಟ್ಟದ್ದು. ಅಡೆತಡೆಗಳು ಮತ್ತು ಸಮಸ್ಯೆಗಳು ಆಧ್ಯಾತ್ಮಿಕ ಜೀವನದಲ್ಲಿ ಅನಿವಾರ್ಯ. ಆದರೆ ಅವುಗಳನ್ನು ಜಯಿಸಬೇಕಾದರೆ, ಮೊದಲು ಅದರ ಅರಿವಿರಬೇಕು. ಅನೇಕ ಸಂದರ್ಭಗಳಲ್ಲಿ ಸಾಧಕನಿಗೆ ತನ್ನ ಪಕ್ಕಿಗೆ ಇರುವ ಮಾನಸಿಕ ಅಡೆತಡೆಗಳ ಬಗ್ಗೆ ತನಗೇ ಅರಿವಿರುವುದಿಲ್ಲ. ಏಕೆಂದರೆ ಅವುಗಳು ಅವನ ಮನಸ್ಸಿನ ಅಪ್ರಜ್ಞಾಸ್ತರದಲ್ಲಿ ಶೇಖರವಾಗಿರುತ್ತವೆ. ಅನೇಕ ವೇಳೆ ಅವನು ಅಸಹಾಯಕನಾಗಿ ಪ್ರಕೃತಿಯ ಅಪ್ರಜ್ಞಾಪ್ರವಾಹದಲ್ಲಿ ಕೊಂಡೊಯ್ಯಲ್ಪಡುತ್ತಿರುವುದರಿಂದ (ಗೀತೆ ೩.೩೩) ತನ್ನ ಆಲೋಚನೆ ಮತ್ತು ಕಾರ್ಯಗಳಲ್ಲಿ ಅವನಿಗೆ ಹತೋಟಿ ಇರುವುದಿಲ್ಲ.

> **ನಮಗೆ ಒಳಿತಾಗುವ ರೀತಿಯಲ್ಲಿ ದೇವರು ನಮ್ಮ ಪ್ರಾರ್ಥನೆಯನ್ನು ಪೂರೈಸುತ್ತಾನೆ. ಎಷ್ಟೋ ವೇಳೆ ತಮಗೆ ಯಾವುದು ಒಳಿತೆಂಬುದೇ ಜನರಿಗೆ ಗೊತ್ತಿರುವುದಿಲ್ಲ.**
> —*ಸ್ವಾಮಿ ಯತೀಶ್ವರಾನಂದ*

ಪ್ರತಿನಿತ್ಯದ ಆಧ್ಯಾತ್ಮಿಕ ಸಾಧನೆಯಲ್ಲಿ, ತನ್ನನ್ನು ತಾನೇ ಪರೀಕ್ಷಿಸಿಕೊಳ್ಳುವುದು ಒಂದು ಅನಿವಾರ್ಯವಾದ ಅಂಗವಾಗಬೇಕು. ತಮ್ಮ ನ್ಯೂನತೆಯನ್ನು ಅರಿತುಕೊಳ್ಳುವುದೇ ದೊಡ್ಡ ವಿಷಯ, ಅದರಿಂದ ಬಿಡಿಸಿಕೊಳ್ಳುವುದು ಮುಂದಿನ ಮೆಟ್ಟಿಲು. ಅನೇಕ ಸಂದರ್ಭಗಳಲ್ಲಿ ಗುರು ಇದನ್ನು ತನ್ನ ಶಿಷ್ಯನಿಗಾಗಿ ಮಾಡುತ್ತಾನೆ. ಅದುಮಿಡಲ್ಪಟ್ಟ ಭಾವನೆಗಳು ಮತ್ತು ಆಸೆಗಳನ್ನು ಶಿಷ್ಯನ ಪ್ರಜ್ಞಾಸ್ತರಕ್ಕೆ ತಂದು ಅವುಗಳೊಡನೆ ಹೇಗೆ ವ್ಯವಹರಿಸಬೇಕೆನ್ನುವುದನ್ನು ತೋರಿಸಿಕೊಡುತ್ತಾನೆ. ಅನೇಕ ತಂತ್ರಾಭ್ಯಾಸಗಳಲ್ಲಿ ಇದೇ ತತ್ತ್ವ ಅಡಕವಾಗಿರುವುದು.

ಭಗವಂತ ಅದನ್ನೇ ಮಾಡಿದ್ದು. ನಾರದರಲ್ಲಿ ಅಡಗಿಕೊಂಡಿದ್ದ ಕಾಮಭೂತದ ಅರಿವನ್ನು ಅವರಿಗೆ ಉಂಟುಮಾಡಲು, ಅದನ್ನು ಹೊರಗೆ ಎಳೆದದ್ದು ಭಗವಂತನೇ. ಆದರೆ ಇಲ್ಲಿಯತನಕ ನಾರದರ ಮುಖ ಕಪಿಯ ಚಹರೆಯನ್ನು ಹೊಂದಿದ್ದರೂ, ನಾರದರು ಕನ್ನಡಿಯಲ್ಲಿ ತಮ್ಮನ್ನು ನೋಡಿಕೊಳ್ಳುವ ಪ್ರಯತ್ನವನ್ನೇ ಮಾಡಿರಲಿಲ್ಲ. ಮತ್ತೊಂದು ವಿಷಯ, ಸರಿಯಾದ ಸಮಯ ಬರುವವರೆಗೂ ನಾರದರಿಗೆ ಈ ವಿಷಯ ತಿಳಿಯುವುದು ಭಗವಂತನಿಗೆ ಬೇಕಿರಲಿಲ್ಲ ಮತ್ತು ಸರಿಯಾದ ಸಮಯ ಇನ್ನೂ ಬಂದಿರಲಿಲ್ಲ. ಇನ್ನು ಕೆಲವೇ ಘಂಟೆಗಳಲ್ಲಿ ರಾಜಕುಮಾರಿಯನ್ನು ಹೊಂದಬೇಕೆಂಬ ಉದ್ದೇಶದಿಂದ ನಾರದರು ಸ್ವಯಂವರ ಸಮಾರಂಭಕ್ಕೆ ಸಂಭ್ರಮದಿಂದ ಮುಂದುವರೆದರು.

ನಾರದರಂತಹ ದೊಡ್ಡ ಋಷಿ, ಭಗವಂತನ ಬಳಿಹೋಗಿ ಅವನ ಸೌಂದರ್ಯವನ್ನು ಅಷ್ಟು ಕೀಳಾದ ಕೆಲಸಕ್ಕಾಗಿ ಕೇಳುವುದು ಅತ್ಯಂತ ಕೆಳಮಟ್ಟದ್ದಾಗಿ ತೋರುವುದು. ಅಂತಹ ಕ್ಷುಲ್ಲಕ ಉದ್ದೇಶಕ್ಕಾಗಿ —ಬೇರೆಲ್ಲೂ ಹೋಗದೆ—ಭಗವಂತನ ಬಳಿ ಹೋದುದರಿಂದ ಕೊನೆಗೂ ಅವರು ಭಗವಂತನ ಕೃಪೆಯಿಂದ ರಕ್ಷಿಸಲ್ಪಟ್ಟದ್ದನ್ನು ನೋಡಬಹುದು. ಹೀಗೆ ಮಾಡದೆ ಅವರು ಬೇರೆ ಪ್ರಾಪಂಚಿಕ ವಿಧಾನಗಳ ಮೊರೆಹೋಗಿದ್ದರೆ ಬಹುಶಃ ಅವರು ತಮ್ಮ ನಾಶವನ್ನು ತಾವೇ ಮಾಡಿಕೊಳ್ಳುತ್ತಿದ್ದರು. ಇದು ಜೀವನದಲ್ಲಿ ನಮಗೊಂದು ದೊಡ್ಡ ಸತ್ಯವನ್ನು ತಿಳಿಸುತ್ತದೆ: 'ಪ್ರತಿಯೊಂದನ್ನೂ ಭಗವಂತನಿಂದ ಪಡೆಯಲು ಪ್ರಯತ್ನಿಸು. ಆ ಆಸೆ ಅದೆಷ್ಟೇ ಪ್ರಾಪಂಚಿಕವಾದುದಾದರೂ ಆಗಿರಲಿ, ಐಹಿಕ ವಿಧಾನಗಳಿಂದ ಅದನ್ನು ಪೂರ್ಣಗೊಳಿಸಲು ಪ್ರಯತ್ನಿಸದೆ, ಅದನ್ನು ಪೂರ್ಣಗೊಳಿಸಲು ಭಗವಂತನನ್ನು ಪ್ರಾರ್ಥಿಸುವುದು ಒಳ್ಳೆಯದು. ಆದ್ದರಿಂದಲೇ ಸಕಾಮ-ಭಕ್ತಿಯನ್ನು ನಮ್ಮ ಶಾಸ್ತ್ರಗಳು ಖಂಡಿಸುವುದಿಲ್ಲ. ನಿಷ್ಕಾಮ-ಭಕ್ತಿಗಿಂತ ಅದು ಕೆಳಮಟ್ಟದಲ್ಲಿದೆ ನಿಜ, ಆದರೂ ಸಕಾಮ-ಭಕ್ತಿ ಪ್ರಯೋಜನವಿಲ್ಲ ಎಂದೇನೂ ಅಲ್ಲ.

ನಿಜವಾದ ಭಕ್ತ ಯಾವುದೇ ರೀತಿಯ ಪ್ರಾಪಂಚಿಕ ಪ್ರಾರ್ಥನೆಗಳನ್ನೂ ಮಾಡುವುದಿಲ್ಲ. ಆತನ ಜೀವನದ ಏಕೈಕ ಗುರಿ ಭಗವಂತ. ಪ್ರೀತಿಗಾಗಿ ಆತ ಭಗವಂತನನ್ನು ಪ್ರೀತಿಸುತ್ತಾನೆ. ಅವನ ಗುರಿ ಮತ್ತು ಸಾಧನ ಎರಡೂ ಭಗವಂತನೇ. ಪ್ರಪಂಚದಲ್ಲಿ ಅಂತಹ ಜನ ಬಹಳ ವಿರಳ. ಹಾಗಾದರೆ, ಅತಿ ಹೆಚ್ಚಿನ ಸಂಖ್ಯೆಯಲ್ಲಿರುವ, ತಮ್ಮ ಕೊನೆಯಿಲ್ಲದ ಆಸೆಗಳನ್ನು ಬಿಡಲು ಸಾಧ್ಯವೇ ಇಲ್ಲದ ವ್ಯಕ್ತಿಗಳ ಪಾಡೇನು? ಭಗವಂತನ ಸಹಾಯವನ್ನು ಪಡೆಯಬೇಕೋ ಅಥವಾ ತಮ್ಮದೇ ಪ್ರಾಪಂಚಿಕ ವಿಧಾನಗಳ ಮೂಲಕ ತಮ್ಮ ಆಸೆಗಳನ್ನು ಪೂರೈಸಿಕೊಳ್ಳಬೇಕೋ? ಅಂತಹ ಮನುಷ್ಯರಿಗೆ

ವೇದಾಂತದ ಗುರುಗಳ ಹಿತವಚನ: ಭಗವಂತನು ರಾಜಮಾತ್ರನಲ್ಲ ಮತ್ತು ನೀವು ಕೇವಲ ಅವನ ಅಧೀನವಾಗಿರುವವರೂ ಅಲ್ಲ. ಅವನು ನಿಮ್ಮ ತಂದೆ, ತಾಯಿ, ಸ್ನೇಹಿತ ಮತ್ತು ಪ್ರಿಯಕರ. ಒಬ್ಬ ರಾಜನ ಮಗ ತನ್ನ ತಂದೆಯನ್ನು ಏನನ್ನು ಬೇಕಾದರೂ ಕೇಳಬಹುದು, ಜೀವನದ ಅತಿ ಸಾಧಾರಣ ವಸ್ತುವನ್ನೂ ಸಹ. ಆದ್ದರಿಂದ ನಿಮ್ಮ ಪ್ರಾಪಂಚಿಕ ಆಸೆಯನ್ನು ಪೂರೈಸಿಕೊಳ್ಳಬೇಕಾದರೆ ಅದಕ್ಕೂ ಭಗವಂತನ ಬಳಿಯೇ ಹೋಗಿ. ಪ್ರಾಪಂಚಿಕ ಕುಟಿಲತನವನ್ನು ಅವಲಂಬಿಸುವುದಕ್ಕಿಂತ ದೈವೀಸಹಾಯವನ್ನು ಪಡೆಯುವುದು ಒಳ್ಳೆಯದು.

ನಮ್ಮ ಋಷಿಗಳು ಹೇಳುತ್ತಾರೆ, ಒಂದು ಕಾಲ ಬರುತ್ತದೆ, ಆಗ ಸಕಾಮ-ಭಕ್ತಿ ನಿಷ್ಕಾಮ-ಭಕ್ತಿಯಾಗಿ ರೂಪಾಂತರಗೊಳ್ಳುತ್ತದೆ. ನಿಮ್ಮ ಎಲ್ಲ ಆಸೆಗಳೂ ಪೂರ್ಣಗೊಳ್ಳುವುದಿಲ್ಲ. ಒಂದು ಆಸೆ ಪೂರ್ಣಗೊಳ್ಳುವುದರೊಳಗೆ ಹತ್ತು ಹೊಸ ಆಸೆಗಳು ಹುಟ್ಟುವುದನ್ನು ನೋಡುತ್ತೀರಿ. ಆಸೆಗಳು ನಿಮ್ಮ ಮನಃಶಾಂತಿಯನ್ನು ಹಾಳುಮಾಡುವುದನ್ನು ನೋಡುತ್ತೀರಿ. ಭೌತಿಕ ಮತ್ತು ಮಾನಸಿಕ ಶಕ್ತಿ ಸೋರಿಹೋಗುತ್ತದೆ. ಕೊಟ್ಟಕೊನೆಗೆ ಹಿಂದಿನಂತೆಯೇ ಅಪರಿಪೂರ್ಣರೂ, ಆಸೆಯುಳ್ಳವರೂ ಆಗಿ ಉಳಿದಿರುತ್ತೀರಿ. ಅಷ್ಟರಲ್ಲಿ ಮನಸ್ಸು ಬೇಸತ್ತುಹೋಗಿರುತ್ತದೆ. ಸಕಾಮಪ್ರಾರ್ಥನೆಗಳು, ಶಾಸ್ತ್ರೋಕ್ತ ಆಚರಣೆಗಳು, ಶಿಸ್ತುಸಂಯಮಗಳಿಂದ ಸಂಚಯಗೊಂಡ ಮನಶ್ಶಕ್ತಿ—ಇವುಗಳ ಪರಿಣಾಮ ಕಂಡುಬರುತ್ತದೆ, ನಿಮಗೊಂದು ದಾರಿ ತೆರೆಯಲ್ಪಡುತ್ತದೆ. ಕ್ರಮಕ್ರಮೇಣ ಭಗವಂತನನ್ನು ಪ್ರೀತಿಗಾಗಿ ಪ್ರೀತಿಸಲು ಪ್ರಾರಂಭಿಸುತ್ತೀರಿ.

> **ಭಕ್ತಿ ಶಕ್ತಿ ಪಾವಿತ್ರ್ಯಗಳಿಗಾಗಿ ಮಾತ್ರ ನಾವು ಪ್ರಾರ್ಥಿಸೋಣ. ಈ ಆಧ್ಯಾತ್ಮಿಕ ಪ್ರಾರ್ಥನೆ ಧ್ಯಾನಕ್ಕೆ ಮೊದಲನೆಯ ಮೆಟ್ಟಿಲು.**
>
> **—ಸ್ವಾಮಿ ಯತೀಶ್ವರಾನಂದ**

ನಾರದರು ಸ್ವಯಂವರ ಮಂದಿರವನ್ನು ಪ್ರವೇಶಿಸಿದರು. ಅವರು ಬಾಗಿಲಬಳಿ ಕಾಣಿಸಿದೊಡನೆ, ಸ್ವಯಂವರಕ್ಕಾಗಿ ಅಲ್ಲಿ ನೆರೆದಿದ್ದ ಎಲ್ಲ ರಾಜರುಗಳೂ ಗೌರವಪೂರ್ವಕವಾಗಿ ಎದ್ದು ನಿಂತು ದೇವರ್ಷಿಗೆ ವಂದನೆ ಸಲ್ಲಿಸಿದರು. ಕಪಿಯ ಮುಖಚಹರೆಯನ್ನು ಹೊಂದಿದವರಿಗೆ ಈ ರೀತಿ ಮಾಡಿದ್ದು ಆಶ್ಚರ್ಯಕರವಾಗಿದೆಯೇ? ಇದೂ ಒಂದು ಭಗವಂತನ ತಂತ್ರ. ಅಲ್ಲಿ ನೆರೆದಿದ್ದ ರಾಜರುಗಳು ನಾರದರನ್ನು ಅವರ ಸಾಮಾನ್ಯ ರೂಪಿನಲ್ಲಿ ನೋಡಿದರು. ಭಗವಂತ ಕಾರ್ಯವನ್ನು ವ್ಯವಸ್ಥೆ ಮಾಡಿದ ರೀತಿ ಹೇಗಿದೆ ಎಂದರೆ ಅಗತ್ಯ ಬಂದಾಗ, ಅದೂ ಕೆಲವರಿಗೆ ಮಾತ್ರ ಕಪಿಯ ರೂಪ ವ್ಯಕ್ತವಾಗಬೇಕು. ನಾರದರನ್ನು ಎಲ್ಲರೆದುರಿಗೆ ಪರಿಹಾಸ್ಯಕ್ಕೊಳಪಡಿಸುವುದು ಭಗವಂತನ ಉದ್ದೇಶವಾಗಿರಲಿಲ್ಲವೆಂಬುದನ್ನು ನಾವು ನೆನಪಿನಲ್ಲಿಟ್ಟುಕೊಳ್ಳಬೇಕು. ಅವರ ನ್ಯೂನತೆಗಳನ್ನು ಅರಿಯುವಂತೆ ಮಾಡಿ ಅದನ್ನು ಸರಿಪಡಿಸುವುದರ ಮೂಲಕ ನಾರದರಿಗೆ ಸಹಾಯ ಮಾಡುವುದು ಭಗವಂತನ ಉದ್ದೇಶವಾಗಿತ್ತು.

ನಾರದರು ಒಳಗೆ ಹೋಗಿ, ಒಂದು ಅನುಕೂಲಕರವಾದ ಜಾಗದಲ್ಲಿ, ದರ್ಪದಿಂದ ಆಸೀನರಾದರು. ತಕ್ಷಣವೇ ಅವರನ್ನು ಹಿಂಬಾಲಿಸಿ ಇಬ್ಬರು ಸಭಾಭವನವನ್ನು ಪ್ರವೇಶಿಸಿ, ನಾರದರ ಎರಡೂ ಬದಿಗಳಲ್ಲಿ ಕುಳಿತುಕೊಂಡರು. ಇವರೇ ಶಿವನ ಸಂಗಡಿಗರಾದ ರುದ್ರಗಣಗಳು. ಶಿವನ ಜೊತೆಯ ಭೇಟಿಯ ನಂತರ ನಾರದರು ಕೈಲಾಸದಿಂದ ಹೊರಟಾಗಲಿಂದ ಇವರಿಬ್ಬರೂ ಅವರನ್ನೇ ಹಿಂಬಾಲಿಸುತ್ತಿದ್ದರು. ಶಿವನ ಜೊತೆಯ ಅವರ ಸಂವಾದವನ್ನು ಇವರಿಬ್ಬರೂ ಕೇಳಿಸಿಕೊಂಡಿದ್ದರು ಮತ್ತು ತಮ್ಮ ಒಡೆಯನ ಜೊತೆ ಈ ಮುನಿವರ್ಯ ಸ್ಪರ್ಧಿಸುತ್ತಿರುವುದಷ್ಟೇ ಅಲ್ಲ, ಸೂಕ್ಷ್ಮವಾಗಿ ತಾನು ಶಿವನಿಗಿಂತ ದೊಡ್ಡವನು ಎಂದು ಹೇಳಿದುದರಿಂದ ಇಬ್ಬರೂ ಕುಪಿತರಾಗಿದ್ದರು. ಅಂತಹ ಸಂದರ್ಶಕನ ಬಗ್ಗೆ ಯಾವ ಸೇವಕ ಸಂತೋಷಪಡಲು ಸಾಧ್ಯ? ತಮ್ಮ ಒಡೆಯನೊಡನೆ ತಮ್ಮ ಅಗೌರವಪೂರ್ವಕವಾದ ನಡವಳಿಕೆಯಿಂದ ಕೊನೆಯಲ್ಲಿ ಅವರು ದುಃಖಪಟ್ಟೇ ಪಡುತ್ತಾರೆಂದು ರುದ್ರಗಣಗಳಿಗೆ ತಿಳಿದಿತ್ತು. ಹಾಗಾಗಿ ಅವರು ತಮಾಷೆ ನೋಡಲು ಕುತೂಹಲದಿಂದ ಅವರನ್ನು ಹಿಂಬಾಲಿಸುತ್ತಿದ್ದರು. ಮೊದಲು ವೈಕುಂಠ, ಅಲ್ಲಿಂದ ವಿಶ್ವಮೋಹಿನಿ ರಾಜಕುಮಾರಿಯಾಗಿರುವ ಸುವರ್ಣರಾಜ್ಯಕ್ಕೂ ಅವರನ್ನು ನೆರಳಿನಂತೆ ಹಿಂಬಾಲಿಸಿದ್ದರು.

ನಾರದರು ಭಗವಂತನನ್ನು ಅವನ ರೂಪಕ್ಕಾಗಿ ಪ್ರಾರ್ಥಿಸುವುದನ್ನೂ ಮತ್ತು ಮುನಿವರ್ಯನನ್ನು ಕಪಿಯ ಮುಖದಿಂದ ಅಲಂಕರಿಸಿದ ಭಗವಂತನ ದೈವೀ ಕುಚೋದ್ಯವನ್ನೂ ಅವರು ನೋಡಿದ್ದರು. ಈ ನಾಟಕದ ತುಟ್ಟತುದಿಯನ್ನು ನೋಡಲು ಅತ್ಯಂತ ಕುತೂಹಲಿಗಳಾಗಿ ಮಾರುವೇಷದಲ್ಲಿ ಅವರು ಈಗ ಸ್ವಯಂವರ ಸಮಾರಂಭಕ್ಕೆ ಬಂದಿದ್ದಾರೆ. ಹಾಗಾಗಿ, ಆ ಒಂದು ದೊಡ್ಡ ಸಭೆಯಲ್ಲಿ, ಈ ಇಬ್ಬರು ಗಣಗಳು ಮಾತ್ರ ನಾರದರ ಕಪಿಯ ಮುಖವನ್ನು ಕಾಣಬಲ್ಲವರಾಗಿದ್ದರು. ಸದ್ಯದಲ್ಲೇ ಮತ್ತೊಬ್ಬರು ಕೂಡ ಅದನ್ನು ನೋಡುವವರಿದ್ದಾರೆ.

ತನ್ನ ಸಂಗಾತಿಗಳಿಂದ ಸುತ್ತುವರೆಯಲ್ಪಟ್ಟ ವಿಶ್ವಮೋಹಿನಿ ಕೈಯಲ್ಲಿ ಹಾರವನ್ನು ಹಿಡಿದು ಸಭೆಯನ್ನು ಪ್ರವೇಶಿಸಿದಳು. ಎಲ್ಲರ ಕಣ್ಣುಗಳೂ ಅವಳೆಡೆಗೆ ತಿರುಗಿದವು. ಆ ಸಭೆಯ ಇಡೀ ವಾತಾವರಣದಲ್ಲಿ ನಿರೀಕ್ಷೆ, ಆತಂಕ, ಅನಿಶ್ಚಿತತೆ ಸ್ಪರ್ಶವೇದ್ಯವಾಗಿದ್ದವು. ಅಲ್ಲಿ ನೆರೆದವರ ಮೇಲೆ ವಿಶ್ವಮೋಹಿನಿ ಗಂಭೀರ ದೃಷ್ಟಿಯನ್ನು ಬೀರಿದಳು. ನಾರದರ ಮೇಲೆ ಅವಳ ದೃಷ್ಟಿ ಬಿದ್ದಾಗ, ತನ್ನನ್ನು ಗೆಲ್ಲುವ ನಿರೀಕ್ಷೆಯಿಂದ ಈ ಸಭೆಯಲ್ಲಿ ಅರ್ಧಮೃಗವೊಂದು ಬಂದಿರುವುದನ್ನು ಕಂಡು ಅವಳು ಅತ್ಯಂತ ರೋಷಗೊಂಡಳು.

ಅವರ ಹತ್ತಿರ ಬರುವುದಿರಲಿ, ಅವರು ಕುಳಿತ ಇಡೀ ಪಂಕ್ತಿಯನ್ನು ಹಾದುಹೋಗಲೂ ಅವಳು ನಿರಾಕರಿಸಿದಳು.

ನಾರದರಿಗೆ ಇನ್ನೊಂದು ದೊಡ್ಡ ಆಘಾತ. ಎಷ್ಟು ವಿಚಿತ್ರ! ಪರಿಸ್ಥಿತಿಯ ಈ ರೀತಿಯ ಬದಲಾವಣೆಯಿಂದ ನಾರದರು ಖಂಡಿತ ತಮ್ಮನ್ನು ತಾವು ಭಾಗ್ಯಶಾಲಿ ಎಂದು ಪರಿಗಣಿಸಬೇಕು. ಮಾಯೆ ನಿಮ್ಮ ಬಳಿ ಬರದೆ, ನಿಮ್ಮನ್ನು ದೂರವಿರಿಸಿದರೆ, ಆ ಸಂಗತಿಯ ಬಗ್ಗೆ ನೀವು ಸಂತೋಷಪಡಬೇಕೋ ಅಥವಾ ದುಃಖಪಡಬೇಕೋ? ನಾರದರ ರಕ್ಷಣೆಯ ಚಿಂತೆ ಸ್ವತಃ ಭಗವಂತನೇ ಮಾಡುತ್ತಿದ್ದುದರಿಂದ ಅವಳು ಅವರ ಬಳಿ ಬರಲಿಲ್ಲ. ನಾರದರು ಕುಳಿತ ಇಡೀ ಪಂಕ್ತಿಯನ್ನು ಅವಳು ತಪ್ಪಿಸಿದುದರಿಂದ ನಾರದರ ಬಳಿ ಕುಳಿತವರೂ ಸಹ ಮಾಯೆಯಿಂದ ರಕ್ಷಿಸಲ್ಪಟ್ಟರು.

ಅಲ್ಲಿ ನೆರೆದಿದ್ದ ಯಾರಿಗೂ ಮಾಲೆಯನ್ನು ರಾಜಕುಮಾರಿ ಹಾಕದೆ ಮುಂದೆ ಸಾಗಿದಳು. ಅವಳು ಪ್ರವೇಶದ್ವಾರದ ಬಳಿ ಹೋಗುತ್ತಿದ್ದಂತೆ ತನ್ನ ಎಲ್ಲ ವೈಭವ ಮತ್ತು ಭವ್ಯತೆಯಿಂದ ಕೂಡಿದ ಶ್ರೀಹರಿ ಇದ್ದಕ್ಕಿದ್ದಂತೆ ಪ್ರತ್ಯಕ್ಷನಾದ. ವಿಶ್ವಮೋಹಿನಿಯ ವದನ ಸಂತೋಷದಿಂದ ಬೆಳಗಿತು. ಅವಳು ಅತ್ಯಂತ ಸಂಭ್ರಮದಿಂದ ಮಾಲೆಯನ್ನು ಶ್ರೀಹರಿಯ ಕೊರಳಿಗೆ ಹಾಕಿದಳು. ದೇವತೆಗಳು ಸ್ವರ್ಗದಿಂದ ಪುಷ್ಪವೃಷ್ಟಿ ಮಾಡಿದರು. ಕಿವಿಗಡಚಿಕ್ಕುವ ಪ್ರಶಂಸಾಪರ ಘೋಷ ಮತ್ತು ಚಪ್ಪಾಳೆಯ ನಡುವೆ ಅವಳನ್ನು ತನ್ನ ವಾಹನವಾದ ಗರುಡನ ಮೇಲೆ ತನ್ನ ಪಕ್ಕದಲ್ಲಿ ಕೂರಿಸಿಕೊಂಡು ವೈಕುಂಠಕ್ಕೆ ಹೊರಟುಹೋದನು.

ನಾರದರು ಸ್ತಬ್ಧರಾದರು. ಇದ್ದಕ್ಕಿದ್ದಂತೆ ಚಿತ್ರ ಸ್ಪಷ್ಟವಾಯಿತು. ತಮ್ಮ ಉರಿಯುತ್ತಿದ್ದ ಹುಚ್ಚುಕೋಪವನ್ನು ಮುಚ್ಚಿಡುವ ವ್ಯರ್ಥ ಪ್ರಯತ್ನ ಮಾಡುತ್ತಾ, "ಭಗವಂತ ನನಗೆ ಮೋಸಮಾಡಿದ್ದಾನೆ!" ಎಂದು ತಮ್ಮಲ್ಲೇ ಗೊಣಗಿಕೊಂಡರು. ತಮ್ಮ ಪಕ್ಕ ಕುಳಿತಿದ್ದ ಆ ಇಬ್ಬರೆಡೆಗೆ ಅವರು ತಿರುಗಿದರು. ಇವರ ಪರಾಜಯವನ್ನು ಅತ್ಯಂತ ಸಂತೋಷದಿಂದ ಅನುಭವಿಸುತ್ತಿದ್ದಾರೇನೋ ಎನ್ನುವಂತೆ ಅವರಿಬ್ಬರೂ ಒಳಗೊಳಗೇ ನಗುತ್ತಿರುವುದನ್ನು ನೋಡಿ ಇನ್ನೂ ಹೆಚ್ಚು ಉಗ್ರರಾದರು. ಕುಚೋದ್ಯದ ಧ್ವನಿಯಲ್ಲಿ ಅವರುಗಳು ಹೇಳಿದರು: "ಹ್ಹ! ಹೋಗಿ, ಕನ್ನಡಿಯಲ್ಲಿ ನಿಮ್ಮ ಮುಖ ನೋಡಿಕೊಳ್ಳಿ!"

ನಾರದರು ಹತ್ತಿರದ ಒಂದು ಕೊಳದಲ್ಲಿ ಇಣುಕಿ ನೋಡಿದರು ಮತ್ತು ಒಂದು ಕಪಿ ತಮ್ಮನ್ನೇ ದಿಟ್ಟಿಸಿ ನೋಡುತ್ತಿರುವುದನ್ನು ಕಂಡು ದಿಗ್ಭ್ರಾಂತರಾದರು. ಶಿವನ ಇಬ್ಬರು ಗಣಗಳಿಗೆ ಸಂತೃಪ್ತಿಯಾಯಿತು. ಈ ಮುನಿವರ್ಯ ಕೊಳದಲ್ಲಿ ಇಣುಕಿ ನೋಡುವುದನ್ನು ನೋಡಿದಾಗ ಋಷಿಯ ಶಾಪಕ್ಕೆ ಗುರಿಯಾಗುವುದಕ್ಕಿಂತ ಇಲ್ಲಿಂದ ತಪ್ಪಿಸಿಕೊಳ್ಳುವುದೇ ಬುದ್ಧಿವಂತಿಕೆ ಎಂದು ಅವರು ಭಾವಿಸಿದರು. ನಾರದರು ತಲೆ ಎತ್ತಿ ನೋಡಿದಾಗ, ಇವರಿಬ್ಬರೂ ಓಡಿಹೋಗುತ್ತಿರುವುದನ್ನು ನೋಡಿದರು. ಒಮ್ಮೆಗೇ ಅವರ ಕೆಂಡ ಕಾರುವ ಪದಗಳು ಹೊರಬಂದವು: "ನೀವಿಬ್ಬರೂ! ರಾಕ್ಷಸರಾಗಿ ಭೂಮಿಯಲ್ಲಿ ಜನಿಸಿ ದುಃಖವನ್ನು ಅನುಭವಿಸಿ."

**ಪರದುಃಖದಿಂದ ಉಂಟಾಗುವ ಸಂತಸ ಆಂತರಿಕ ಸಂತಾಪದ ಪರಿಣಾಮ.**

ಖಂಡಿತ ಸರಿಯಾದ ಶಿಕ್ಷೆ! ಆ ಇಬ್ಬರು ಗಣಗಳ ವರ್ತನೆ ಕ್ಷಮಿಸಲು ಸಾಧ್ಯವಿಲ್ಲದ್ದು. ನಾರದರ ಅವನತಿಯನ್ನು ನೋಡುವುದು ಮಾತ್ರ ಅವರುಗಳ ಇಚ್ಛೆಯಾಗಿತ್ತು. ನಾರದರ ದುಃಖ ಮತ್ತು ಕಷ್ಟದಲ್ಲಿ ಅವರುಗಳು ಸಂತೋಷವನ್ನು ಕಂಡರು. ಇದು ನಿಜವಾಗಿ ಆಸುರೀ ಪ್ರವೃತ್ತಿ. ನಾರದರ ಕಾರ್ಯವನ್ನು ದೌರ್ಬಲ್ಯ ಎಂದು ಕರೆಯುವುದಾದರೆ, ಶಿಕ್ಷಾರ್ಹವಾದ ಅಪರಾಧವನ್ನೇ ಅವರಿಬ್ಬರೂ ಮಾಡಿದ್ದಾರೆ. ತಮ್ಮ ವರ್ತನೆಗಳಿಂದ ಇಬ್ಬರೂ ಆಗಲೇ ಆಸುರೀಗುಣವನ್ನು ಪ್ರದರ್ಶಿಸಿದ್ದಾರೆ. ನಾರದರ ಶಾಪ ಅವರಲ್ಲಿ ಅಡಗಿದ್ದ ರಾಕ್ಷಸನನ್ನು ಹೊರಗೆ ತರಲು ಸಾಧ್ಯವಾಯಿತು. ನಾವು ಆಗಲೇ ಹೇಳಿದಂತೆ ಸುಪ್ತಮನಸ್ಸಿನಲ್ಲಿ ಅಡಗಿರುವ ಒಳಗಿನ ದೌರ್ಬಲ್ಯ ಹೊರಗೆ ಬರುವುದು ಒಳ್ಳೆಯದೇ, ಆಗಲೇ ಅದನ್ನು ತೊಡೆದುಹಾಕುವ ಅವಕಾಶ ಸಿಗುತ್ತದೆ.

ತಮ್ಮ ಶಾಪವನ್ನು ಉಚ್ಚರಿಸಿದ ನಂತರ, ನಾರದರು ಮತ್ತೊಮ್ಮೆ ನೀರಿನಲ್ಲಿ ಇಣುಕಿದರು. ಈ ಬಾರಿ ಕಪಿಯ ರೂಪ ಕಣ್ಮರೆಯಾಗಿತ್ತು. ಪ್ರತಿಬಿಂಬದಲ್ಲಿ ನಾರದರು ತಮ್ಮ ಯಾವಾಗಿನ ರೂಪವನ್ನು ನೋಡಿದರು. ಭಗವಂತನ ಉದ್ದೇಶ ನೆರವೇರಿತು, ಅವನ ನಿಗೂಢ ಶಕ್ತಿಯಿಂದ ಹೊರಹೊಮ್ಮಿದ ಮಾಯಾಸೃಷ್ಟಿಯನ್ನು ಹಿಂದಕ್ಕೆ ತೆಗೆದುಕೊಂಡನು. ಈಗಲಾದರೂ ನಾರದರಿಗೆ ವಿವೇಕ ಬರಬಹುದಿತ್ತು. ಇಲ್ಲ, ಅವರ ವಿದ್ಯೆ ಪೂರ್ಣಗೊಳ್ಳಲು ಇನ್ನೂ ಕೆಲವು ಮುಖ್ಯಾಯದ ಪಾಠಗಳು ಉಳಿದಿವೆ. ಇನ್ನೂ ಕೋಪದಿಂದ ಕುದಿಯುತ್ತಾ, ನಾರದರು ವೈಕುಂಠದ ಕಡೆಗೆ ಹೊರಟರು. "ಮುಖ್ಯ ಅಪರಾಧಿ ಹರಿ, ರಾಜಕುಮಾರಿಯ ಮೇಲೆ ಅವನಿಗೇ ಆಸಕ್ತಿ ಹುಟ್ಟಿತ್ತು, ಹಾಗಾಗಿ ಇಡೀ ಪ್ರಪಂಚದ ಎದುರಿಗೆ ನನ್ನನ್ನು ಮೂರ್ಖನನ್ನಾಗಿಸಿದ" ಎಂದು ತಮಗೆ ತಾವೇ ಹೇಳಿಕೊಂಡರು.

ನಾರದರು ಭಗವಂತನನ್ನು ಭೇಟಿಯಾಗಲು ವೇಗವಾಗಿ ಧಾವಿಸುತ್ತಿರುವಾಗ, ಲಕ್ಷ್ಮಿ ಮತ್ತು ವಿಶ್ವಮೋಹಿನಿಯೊಡನೆ ಭಗವಂತ ತಾನೇ ಅವರೆದುರು ಕಾಣಿಸಿಕೊಂಡು, "ಮಗು, ಎಲ್ಲಿಗೆ ಹೋಗುತ್ತಿರುವೆ?" ಎಂದು ಅತ್ಯಂತ ಪ್ರೀತಿಯಿಂದ ವಿಚಾರಿಸಿದ. ಭಗವಂತನ ಈ ಪ್ರಶ್ನೆಯ ಇಂಗಿತ ನಾರದರನ್ನು ಎಚ್ಚರಗೊಳಿಸುವುದಾಗಿತ್ತು. ನಾರದರು ಹೋಗಲು ಬಯಸಿದ್ದು ವೈಕುಂಠಕ್ಕೆ. ಆದಕ್ಕಾಗಿ ಅವರು ಆರಿಸಿದ್ದು ಕೋಪ ಮತ್ತು ಪ್ರತೀಕಾರದ ದಾರಿ. ಈ ದಾರಿ ಭಗವಂತನೆಡೆಗೆ ಒಯ್ಯುವುದೇ? ಅಥವಾ ಭಗವಂತನಿಂದ ವಿಮುಖನನ್ನಾಗಿ ಮಾಡುವುದೇ? ಕಾಮ, ಕ್ರೋಧ ಮತ್ತು ಲೋಭ ನರಕದ ಬಾಗಿಲುಗಳು ಎಂದು ಗೀತೆಯಲ್ಲಿ ಹೇಳಿದೆ (೧೬.೨೧). ಪ್ರತೀಕಾರ ತೆಗೆದುಕೊಳ್ಳುವ ಹುಚ್ಚು ಆವೇಶದಿಂದ ನಾರದರು ಖಂಡಿತವಾಗಿ ವೈಕುಂಠಕ್ಕೆ ಹೋಗುವುದರ ಬದಲು, ನೇರವಾಗಿ ತೆರೆದ ನರಕದ್ವಾರದ ಕಡೆಗೆ ಹಿಂದುಮುಂದು ನೋಡದೆ

**ಕೆಲವು ಜನರಿರುವರು, ಅವರು ಪೂರ್ವಕ್ಕೆ ಹೋಗಬೇಕಾಗಿದ್ದರೆ, ಪಶ್ಚಿಮದ ಕಡೆ ಹೋಗುತ್ತಾರೆ. ಹಾಗೇಕೆ ಎಂದು ಅವರನ್ನು ಕೇಳಿದರೆ ಏಕೆಂದರೆ ನಾನು ಉತ್ತರಕ್ಕೆ ಹೋಗಬೇಕಾಗಿದೆ ಎನ್ನುವರು.**

—ಸ್ವಾಮಿ ಯತೀಶ್ವರಾನಂದ

ನುಗ್ಗುತ್ತಿದ್ದರು. ಯಾವಾಗಲೂ ಅವನ ಪ್ರೀತಿಯ ಭಕ್ತನ ಯೋಗ ಕ್ಷೇಮವನ್ನೇ ಬಯಸುವ ಭಗವಂತ "ಮಗು, ಎಲ್ಲಿಗೆ ಹೋಗು ತ್ತಿರುವೆ?" ಎಂದು ಕೇಳುವುದಲ್ಲದೆ ಇನ್ನೇನು ಕೇಳಲು ಸಾಧ್ಯ?

ಆದರೆ "ಕ್ರೋಧವನ್ನು ಜಯಿಸಿದ" ನಾರದರು ಈಗ ತಾವೇ ಕ್ರೋಧದ ಪ್ರತಿರೂಪವಾಗಿದ್ದಾರೆ, ಪ್ರತಿಯೊಂದನ್ನೂ ಪ್ರತಿಯೊಬ್ಬ ರನ್ನೂ ತಪ್ಪಾಗಿ ಅರ್ಥಮಾಡಿಕೊಳ್ಳುತ್ತಿದ್ದಾರೆ. ವಿವೇಕದಿಂದ ಕೂಡಿದ ನಡವಳಿಕೆಯನ್ನು ಸಂಪೂರ್ಣವಾಗಿ ಕಳೆದುಕೊಂಡು ಭಗ ವಂತನನ್ನು ಅನೇಕ "ದುಷ್ಕಾರ್ಯ"ಗಳನ್ನು ಮಾಡಿದವನೆಂದು ದೂಷಿಸುತ್ತಾ, ನಿಂದಿಸಲು ಪ್ರಾರಂಭಿಸಿದರು. ಕೇವಲ ನಿಂದಿಸುವುದ ರಿಂದ ತೃಪ್ತರಾಗದೆ ಶಾಪವನ್ನೂ ಇತ್ತರು : "ಓ ಭಗವಂತ, ನೀನು ಮನುಷ್ಯನಾಗಿ ಜನ್ಮತಾಳು. ಏಕೆಂದರೆ ಆ ರೂಪದಿಂದಲೇ ನೀನು ಸ್ವಯಂವರ ಸಮಾರಂಭದಲ್ಲಿ ನನ್ನನ್ನು ಮೋಸಗೊಳಿಸಿದೆ. ಎರಡನೆಯದು, ನಾನು ಈಗ ಅನುಭವಿಸುತ್ತಿರುವಂತೆ, ನೀನೂ ಕೂಡ ನಿನ್ನ ಪ್ರೀತಿಪಾತ್ರರ ಅಗಲಿಕೆಯಿಂದಾಗುವ ದುಃಖವನ್ನು ಅನುಭವಿಸು. ಮೂರನೆಯದು, ನೀನು ನನಗೆ ಕಪಿಯ-ರೂಪವನ್ನು ಕೊಟ್ಟೆ, ಹಾಗಾಗಿ ನೀನು ಮನುಷ್ಯನಾಗಿ ಹುಟ್ಟಿದಾಗ ಕಪಿಗಳ ಮೇಲೆ ಅವಲಂಬಿತನಾಗುವಂತಾಗಲಿ."

ನಾರದರು ವಾಕ್ಯವನ್ನು ಪೂರ್ಣಗೊಳಿಸಿ ಸ್ವಲ್ಪ ತಡೆದು, ವಿಜಯೋತ್ಸಾಹದಿಂದ ಭಗವಂತನ ಕಡೆಗೆ ನೋಡಿದರು. ಭಗ ವಂತನು ಪ್ರಸನ್ನತೆಯಿಂದ ನಗುತ್ತಿರುವುದನ್ನು ಕಂಡರು! ಇದು ನಾರದರಿಗೊಂದು ದೊಡ್ಡ ಸೋಲು. ಅವರು ಅಷ್ಟೊಂದು ನಿಂದಿಸಿ ದ್ದರೂ ಸಹ, ಭಗವಂತನಲ್ಲಿ ಯಾವುದೇ ಅಸಹನೆ, ಕೋಪ, ತಿರ ಸ್ಕಾರದ ಕುರುಹೂ ಇರಲಿಲ್ಲ. ಅದಕ್ಕೆ ತದ್ವಿರುದ್ಧವಾಗಿ, "ನಾನು ಇದಕ್ಕಾಗೇ ಕಾಯುತ್ತಿದ್ದೆ!" ಎಂದು ಹೇಳುತ್ತಿದ್ದಾನೇನೋ ಎನ್ನುವಂತೆ ನಗುತ್ತಾ ನಿಂತಿದ್ದಾನೆ. ಇಷ್ಟುಹೊತ್ತಿಗೆ ಲಕ್ಷ್ಮಿ ಮತ್ತು ವಿಶ್ವಮೋಹಿನಿ ಹರಿಯ ಪಕ್ಕದಿಂದ ಅಂತರ್ಧಾನರಾದರು. ಪರ ಮಾನಂದದಿಂದ ಕೂಡಿದ, ಕರುಣಾಪೂರಿತ ಭಗವಂತನ ಮುಖ ಭಾವವನ್ನು ನಾರದರು ನೋಡುತ್ತಿದ್ದಂತೆಯೇ ಅವರ ದೃಷ್ಟಿಯಿಂದ ಮಾಯೆಯ ತೆರೆ ಸರಿಯಿತು. ಅವರಿಗೆ ವಿವೇಕೋದಯವಾಯಿತು. ತಾತ್ಕಾಲಿಕವಾಗಿ ತಾನು ಹೇಗೆ ಮಾಯೆಯ ಶಕ್ತಿಯಿಂದ ಮೋಸ ಹೋಗಿದ್ದೆ ಮತ್ತು ಭಗವಂತ ತನ್ನನ್ನು ಹೇಗೆ ರಕ್ಷಿಸಿದ ಎನ್ನುವುದು ಇದ್ದಕ್ಕಿದ್ದಂತೆಯೇ ಅವರಿಗೆ ಅರ್ಥವಾಯಿತು. ತಮ್ಮ ಮೂರ್ಖ ತನದ ವರ್ತನೆಯಿಂದ ನಾರದರಿಗೆ ತಮ್ಮ ಬಗ್ಗೆಯೇ ಜಿಗುಪ್ಸೆ ಉಂಟಾಯಿತು. ಎಲ್ಲದಕ್ಕಿಂತ, ಭಗವಂತನ ಮೇಲೆ ದೋಷಾ ರೋಪಣೆ ಮಾಡಿದ ಉದ್ಧಟತನಕ್ಕೆ ಮತ್ತು ಅವನಿಗೆ ಶಾಪವನ್ನು ಸಹ ಕೊಟ್ಟಿದ್ದಕ್ಕೆ, ನಾರದರು ತಮ್ಮನ್ನು ತಾವು ಕ್ಷಮಿಸದಾದರು. ತೀವ್ರ ಪರಿತಾಪ ಮತ್ತು ವ್ಯಸನದಿಂದ ಭಗವಂತನ ಪಾದಗಳಿಗೆ ಬಿದ್ದು ಅವನ ಕ್ಷಮೆ ಯಾಚಿಸಿದರು. ತಾನು ತನ್ನ 'ಶಾಪ'ವನ್ನು ಹಿಂತೆಗೆದುಕೊಳ್ಳುತ್ತೇನೆಂದು ಹೇಳಿದಾಗ, ಹಾಗೆ ಮಾಡದಂತೆ ಅವರನ್ನು ತಡೆದ ಭಗವಂತ, "ನನ್ನ ಇಚ್ಛೆಯಿಲ್ಲದೆ ಏನಾದರೂ ನಡೆಯುವುದೆ, ಮಗು?" ಎಂದು ಹೇಳಿದ.

ಈ ಎರಡು ಕಂತುಗಳಲ್ಲಿ ನಾವು ಅಧ್ಯಯನ ಮಾಡುತ್ತಿರುವ ನಾರದರ ಕಥೆಯು, ಮಾಯೆಯ ಮರುಳುಗೊಳಿಸುವ ಶಕ್ತಿಯನ್ನೂ ಆಧ್ಯಾತ್ಮಿಕ ಹಾದಿಯಲ್ಲಿ ಅಡಗಿರುವ ಸ್ಥೂಲ ಮತ್ತು ಸೂಕ್ಷ್ಮ ಅಪಾಯಗಳನ್ನೂ ಆತ್ಮಾವಲೋಕನ, ಸದಾಜಾಗೃತಿ, ಅಚಲ ಶ್ರದ್ಧೆ, ನಿಜವಾದ ನಮ್ರತೆ ಇವುಗಳ ಪ್ರಾಮುಖ್ಯತೆಯನ್ನೂ ನಮಗೆ ತೋರಿಸುತ್ತದೆ. ಆಧ್ಯಾತ್ಮಿಕ ಸಾಧಕರಿಗೆ ಮಾರ್ಗದರ್ಶನ ಮಾಡುವ ದೈವೀಶಕ್ತಿಯ ಸಲಹುವ ಕೈಯ ಬಗ್ಗೆ ನಮಗೆ ನಿರಂತರವಾದ ಆಶ್ವಾಸನೆಯನ್ನೂ ನೀಡುತ್ತದೆ. ಯಾವಾಗ ನೀವು ಭಗವಂತನ ಕೈಹಿಡಿಯಲು ಪ್ರಯಾಸದಿಂದ ಹೋರಾಡುತ್ತಿರುತ್ತೀರೋ, ಆಗ ಈ "ಕತ್ತಿಯ ಅಲಗು" ಹರಿತವಾಗಿಯೂ ಮತ್ತು ಭಯಾನಕವಾಗಿಯೂ ತೋರುವುದು; ಆದರೆ ಭಗವಂತನೇ ನಿಮ್ಮ ಕೈಹಿಡಿದಾಗ ಈ "ಕತ್ತಿಯ ಅಲಗು" ಹರಿತವಿಲ್ಲದ್ದೂ ಮತ್ತು ಪರಿಣಾಮಕಾರಿ ಯಲ್ಲದ್ದೂ ಆಗುವುದು ಎನ್ನುವುದನ್ನು ಈಗಲೂ ನೀವು ಸಂದೇಹಿಸುವಿರೇನು?

◆

## ಆಶ್ರಮದ ಕಾರ್ಯಕ್ರಮಗಳು

### ಫೆಬ್ರುವರಿ 2004

| | | |
|---|---|---|
| ಏಕಾದಶಿ | 2 | ಸೋಮವಾರ |
| ಅದ್ಭುತಾನಂದ ಜಯಂತಿ | 6 | ಶುಕ್ರವಾರ |
| ಏಕಾದಶಿ | 16 | ಸೋಮವಾರ |
| ಮಹಾಶಿವರಾತ್ರಿ | 18 | ಬುಧವಾರ |
| ಶ್ರೀರಾಮಕೃಷ್ಣ ಜಯಂತಿ | 22 | ಭಾನುವಾರ |

ದಿನಾಂಕ 23.02.2004 ರಿಂದ 29.02.2004ರವರೆಗೆ ಮೈಸೂರು ಶ್ರೀರಾಮಕೃಷ್ಣ ಆಶ್ರಮದ ವಾರ್ಷಿಕೋತ್ಸವ ನಡೆಯುತ್ತದೆ. ಅದರಲ್ಲಿ ವಿಶೇಷ ಪ್ರವಚನಗಳು, ಸಾಂಸ್ಕೃತಿಕ ಕಾರ್ಯಕ್ರಮಗಳು, ಹರಿಕಥೆ ಮೊದಲಾದವು ಇರುತ್ತವೆ.